## ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಬನಹಟ್ಟಿ

ಸಿ.ಸಿ. ಸಂ.575/2025
ಅಸಾ-1 (ಚಾಸಾ-1)

| | | |
|---|---|---|
| ಹೆಸರು | : | ಪವಾಡೆಪ್ಪ ಮಾದರ |
| ತಂದೆಯ ಹೆಸರು | : | ಲಕ್ಕಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಯರಗಟ್ಟಿ |

ದಿನಾಂಕಃ 10-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಸಹಾಯಕ ಸರಕಾರಿ ಅಭಿಯೋಜಕರವರಿಂದ

ನನಗೆ ಚಾಸಾ-8 ಮತ್ತು 9 ಗೊತ್ತು. ಚಾಸಾ-10 ರಿಂದ 12 ರವರು ಗೊತ್ತಿಲ್ಲ. ದಿನಾಂಕಃ 24-03-2025 ರಂದು ಯರಗಟ್ಟಿಯಿಂದ ಮೋಟರ ಸೈಕಲ್ ನಂ.ಕೆಎ-48/ಎಕ್ಸ-9423 ನೇದ್ದರ ಮೇಲೆ ಚಿಮ್ಮಡ ಗ್ರಾಮಕ್ಕೆ ಕೆಲಸಕ್ಕೆ ಹೋಗಿದ್ದೆನು. ಚಿಮ್ಮಡ ಗ್ರಾಮದ ಪಿಕೆಪಿಎಸ್ ಸೊಸೈಟಿಯ ಹತ್ತಿರ ಇರುವ ಫಿಲ್ಟರ ನೀರಿನ ಟ್ಯಾಂಕ್ ಹತ್ತಿರ ನನ್ನ ವಾಹನ ನಿಲ್ಲಿಸಿ, ಗ್ರಾಮದಲ್ಲಿ ಹಾಲು ಸಂಗ್ರಹ ಮಾಡಲು ಹೋಗಿದ್ದೆನು. ರಾತ್ರಿ 09-00 ಗಂಟೆ ಸುಮಾರಿಗೆ ಕೆಲಸ ಮುಗಿಸಿಕೊಂಡು ಸ್ಥಳಕ್ಕೆ ಬಂದಾಗ ನನ್ನ ಮೋಟರ ಸೈಕಲ್ ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿದ್ದರು. ಆ ಬಗ್ಗೆ ಚಾಸಾ-8 ಮತ್ತು 9 ರೊಂದಿಗೆ ಇತರ ಎಲ್ಲಾ ಕಡೆಗೆ ವಾಹನ ಹುಡುಕಾಡಿದಾಗ ಸಿಕ್ಕಿರುವುದಿಲ್ಲ. ಆದ್ದರಿಂದ ನಾನು ಬನಹಟ್ಟಿ ಠಾಣೆಗೆ ದಿನಾಂಕಃ 11-04-2025 ರಂದು ಹೋಗಿ ದೂರು ನೀಡಿರುತ್ತೇನೆ. ನಾನು ನೀಡಿದ ದೂರು ನೋಡುತ್ತಿದ್ದು, ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ದೂರನ್ನು ನಾನು ಹೇಳಿದಂತೆ ಚಾಸಾ-9 ರವರು ಬರೆದಿರುತ್ತಾರೆ.

ಅದೇ ದಿನ ಪೋಲಿಸರು ಬೆಳಿಗ್ಗೆ 11-00 ರಿಂದ 12-00 ಗಂಟೆ ಸುಮಾರಿಗೆ ಠಾಣೆಗೆ ಕರೆಯಿಸಿ ನನ್ನ ಮೋಟರ ಸೈಕಲ್ ಸಿಕ್ಕಿರುವುದಾಗಿ ಹೇಳಿ ತೋರಿಸಿದರು. ಅದೇ ದಿನ ಚಿಮ್ಮಡ ಗ್ರಾಮದಲ್ಲಿ ಸಂಜೆ 06-00 ರಿಂದ 07-00 ರವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಮೋಟರ ಸೈಕಲ್ ಕಳ್ಳತನ ಮಾಡಿದ ವ್ಯಕ್ತಿಯನ್ನು ತೋರಿಸಿದರು. ಪಂಚನಾಮೆಯ ಕಾಲಕ್ಕೆ ಚಾಸಾ-2 ಮತ್ತು 3 ರವರು ಇದ್ದರು. ಮೋಟರ ಸೈಕಲ್ ಕಳ್ಳತನ ಮಾಡಿದ ವ್ಯಕ್ತಿಯ ಹೆಸರು ಗೊತ್ತಿಲ್ಲ, ಆ ಬಗ್ಗೆ ಹೇಳಿಕೆ ನೀಡಿರುವುದಿಲ್ಲ.

10/10

ಪವಾಡೆಪ್ಪ ಮಾದರ

ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಎರಡು ಫೋಟೋ ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಆ ದಿನ ಪಂಚನಾಮೆಯ ಕಾಲಕ್ಕೆ ತೋರಿಸಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

(ಸಹಾಯಕ ಸರಕಾರಿ ಅಭಿಯೋಜಕರವರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು.)

<u>ಪಾಟೀ ಸವಾಲುಃ- ಸಹಾಯಕ ಸರಕಾರಿ ಅಭಿಯೋಜಕರವರಿಂದ</u>

ದಿನಾಂಕಃ 12-04-2025 ರಂದು ಪೋಲಿಸರು ಠಾಣೆಯಲ್ಲಿ ಒಬ್ಬ ವ್ಯಕ್ತಿಯನ್ನು ತೋರಿಸಿ ಅವರ ಹೆಸರು ಮಹಾಂತೇಶ ಕಂಠೆಪ್ಪ ಬಿಸ್ಟನವರ ಸಾಃ ಸತ್ತಿ ಎಂದು ತೋರಿಸಿ ಈಗ ಓದಿ ಹೇಳಿದಂತೆ ದಿನಾಂಕಃ 12-04-2025 ರಂದು ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಬಿ.ಆರ್.ಎಂ. ವಕೀಲರಿಂದ</u>

ನಾನು 4 ನೇ ತರಗತಿವರೆಗೆ ಅಭಾಸ ಮಾಡಿರುತ್ತೇನೆ. ನಾನು ಕೂಲಿ ಕೆಲಸ ಮಾಡುತ್ತೇನೆ. ಚಾಸಾ-2 ಮತ್ತು 3 ರವರು ನನ್ನ ಗೆಳೆಯರು ಎಂದರೆ ಸರಿಯಲ್ಲ. ನಾನು ದಿನಾಂಕಃ 24-03-2025 ರಂದು ಹಾಲನ್ನು ಕೆಎಂಎಫ್ ವಾಹನದಲ್ಲಿ ಹಾಲು ತುಂಬಲು ಮೋಟರ ಸೈಕಲ್ ಹಚ್ಚಿ ಹೋಗಿದ್ದೆನು. ದಿನಾಂಕಃ 11-04-2025 ರಂದು ನಾನು ದೂರು ಸಲ್ಲಿಸಿರುತ್ತೇನೆ. ದಿನಾಂಕಃ 23-04-2025 ರಂದು ಸಲ್ಲಿಸಿದ ದೂರನ್ನು ದಿನಾಂಕಃ 11-04-2025 ಎಂದು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ತಿದ್ದುಪಡಿ ಸ್ಥಳದಲ್ಲಿ ನಾನು ಸಹಿ ಹಾಕಿಲ್ಲ. ನನ್ನ ಮೋಟರ ಸೈಕಲ್ ಹುಡುಕಾಡಿ ಸಿಗದೇ ಇರುವುದರಿಂದ ದೂರು ಕೊಡಲು ವಿಳಂಬ ಆಗಿರುತ್ತದೆ. ಚಿಮ್ಮಡದಿಂದ ಆಸಂಗಿ 10 ಕಿ.ಮೀ ದೂರದಲ್ಲಿದೆ. ನನ್ನ ಮೋಟರ ಸೈಕಲ್ ಕಳ್ಳತನವಾದ ವಿಷಯ ಚಾಸಾ-8 ರಿಗೆ ತಿಳಿಸಿದ್ದೆನು. ಚಾಸಾ-8 ಮತ್ತು 9 ನನ್ನ ಜೊತೆ ಕೆಲಸ ಮಾಡುತ್ತಿರುವುದರಿಂದ ಅವರು ಆ ದಿನ ನನ್ನ ಜೊತೆ ಇದ್ದರು. ಚಾಸಾ-8 ಮತ್ತು 9 ನನ್ನ ಗೆಳೆಯರು ಎಂದರೆ ಸರಿಯಲ್ಲ.

ಪ್ರವಾಪ್ಪೆ ಅಯಿಒದ

ನಿಪಿ-2 ರ ಪಂಚನಾಮೆಯನ್ನು ಚಾಸಾ-9 ರವರು ಬರೆದಿರುತ್ತಾರೆ. ಪಂಚನಾಮೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಮೋಟರ ಸೈಕಲ್ ಎಲ್ಲಿಂದ, ಯಾವಾಗ ಮತ್ತು ಯಾರಿಂದ ಜಪ್ತಿಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆದರೆ ಆರೋಪಿತನಿಂದ ವಶಪಡಿಸಿಕೊಂಡಿರುವುದಾಗಿ ಠಾಣೆಯಲ್ಲಿ ಹೇಳಿರುತ್ತಾರೆ. ಪಂಚನಾಮೆ ಸ್ಥಳದ ಚಕಬಂದಿ ಹೇಳಲು ಬರುವುದಿಲ್ಲ. ದಿನಾಂಕಃ 24-03-2025 ರಂದು ಚಿಮ್ಮಡ ಗ್ರಾಮದಲ್ಲಿ ನನ್ನ ಮೋಟರ ಸೈಕಲ್ ನಿಲ್ಲಿಸಿ ಕೆಲಸಕ್ಕೆ ಹೋದಾಗ ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಹೇಳಿಕೆಯ ಮೇರೆಗೆ ಆರೋಪಿತನೇ ಕಳ್ಳತನ ಮಾಡಿರುತ್ತಾನೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈಯಕ್ತಿಕವಾಗಿ ಆರೋಪಿತನೇ ಕಳ್ಳತನ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿತನೇ ಮೋಟರ ಸೈಕಲ್ ಕಳ್ಳತನ ಮಾಡಿದ ವ್ಯಕ್ತಿ ಎಂದು ಪೋಲಿಸರು ತೋರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಮತ್ತು ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಪ್ರಭಾರ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ

ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಬನಹಟ್ಟಿ

ಸಿ.ಸಿ. ಸಂ.575/2025
ಅಸಾ-2 (ಚಾಸಾ-2)

| | | |
|---|---|---|
| ಹೆಸರು | : | ಯಲ್ಲಪ್ಪ ಹನಮರ |
| ತಂದೆಯ ಹೆಸರು | : | ಪರಪ್ಪ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಚಿಮ್ಮಡ |

ದಿನಾಂಕಃ 10-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ಸಹಾಯಕ ಸರಕಾರಿ ಅಭಿಯೋಜಕರವರಿಂದ

ನನಗೆ ಚಾಸಾ-3 ಗೊತ್ತು. ಚಾಸಾ-1 ರ ಮೋಟರ ಸೈಕಲ್ ಕಳ್ಳತನವಾದ ವಿಷಯವಾಗಿ ಪೋಲಿಸರು ದಿನಾಂಕಃ 11-04-2025 ರಂದು ಸಂಜೆ 06-15 ರಿಂದ 07-15 ರವರೆಗೆ ಮೋಟರ ಸೈಕಲ್ ಕಳ್ಳತನವಾದ ಸ್ಥಳದಲ್ಲಿ ಚಾಸಾ-1 ರವರು ತೋರಿಸಿದಂತೆ ಪಂಚನಾಮೆ ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ-3 ರವರು ಇದ್ದರು. ಕಡತದಲ್ಲಿರುವ ಪಂಚನಾಮೆಯಲ್ಲಿ ಸಾಕ್ಷಿ ತನ್ನ ಸಹಿ ಗುರುತಿಸಿದ್ದು, ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೋಲಿಸರು ಪೋಟೋ ಪಡೆದಿರುತ್ತಾರೆ. ಸದರಿ ಪೋಟೋ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ಬಿಎಂಎ ವಕೀಲರಿಂದ

ನಾನು 10 ನೇ ತರಗತಿವರೆಗೆ ಅಭ್ಯಾಸ ಮಾಡಿರುತ್ತೇನೆ. ನಾವು ದಿನನಿತ್ಯ ಬೆಳಿಗ್ಗೆ 10-00 ರಿಂದ ಸಂಜೆ 04-00 ರವರೆಗೆ ಕೆಲಸಕ್ಕೆ ಹೋಗಿ ಮರಳಿ ಬರುತ್ತೇವೆ. ಗುನ್ಹಾ ಜಾಗೆಯಿಂದ ನಮ್ಮ ಮನೆ ಸುಮಾರು ಒಂದು ಕಿ.ಮೀ ದೂರದಲ್ಲಿ ಇರುತ್ತದೆ. ಚಾಸಾ-1 ನನ್ನ ಗೆಳೆಯ ಎಂದರೆ ಸರಿಯಲ್ಲ. ನನ್ನನ್ನು ಪಂಚನಾಮೆಗೆ ಸಾಕ್ಷಿದಾರರಾಗಿ ಪೋಲಿಸರು ಕರೆದಿರುತ್ತಾರೆ. ಪೋಲಿಸರು ಪಂಚನಾಮೆಗೆ ಬರುವಂತೆ ನೋಟಿಸ ಕೊಟ್ಟಿರುತ್ತಾರೆ. ನೋಟಿಸ ನೀಡಿದಾಗ ನಾನು ಬಸ್ ನಿಲ್ದಾಣ ಹತ್ತಿರ ಇದ್ದೇನು. ಆಗ ಸಂಜೆ 04-00 ಗಂಟೆಯಾಗಿತ್ತು. ಪಂಚನಾಮೆ ಬರೆಯಲು ನಾನು ಪೋಲಿಸರಿಗೆ ಹೇಳಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಷಯಗಳು ಗೊತ್ತಾ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ. ಪೋಲಿಸರು ಪಂಚನಾಮೆ ಬರೆದ ನಂತರ ಸಹಿ ಹಾಕುವಂತೆ ಹೇಳಿದ ಮೇರೆಗೆ ಸಹಿ

[signature] ಡಿ 10/10

ಹಾಕಿರುತ್ತೇನೆ. ಪಂಚನಾಮೆಯನ್ನು ಸಂಜೆ 04-00 ರಿಂದ ಅರ್ಧ ಗಂಟೆವರೆಗೆ ಮಾಡಿರುತ್ತಾರೆ. ಪಂಚನಾಮೆಯ ಸ್ಥಳದ ನಂಬರ ಗೊತ್ತಿಲ್ಲ. ಪಂಚನಾಮೆಯ ಸ್ಥಳದ ಚಕಬಂದಿ ಗೊತ್ತಿಲ್ಲ. ಪೋಲಿಸರು ನಮ್ಮ ಸಮಕ್ಷಮ ನಿಪಿ-2 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಪ್ರಭಾರ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ